**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 384/2020**

**ಸಿಡಬ್ಲ್ಯು ಃ 1**

**ಹೆಸರು** ಃ ಖಾಜಾಸಾಬ ಬಾಬು ನಾಯಕವಾಡಿ

**ವಯಾ** ಃ 34 ವರ್ಷ

**ಉದ್ಯೋಗ** ಃ ಕೆ ಎಸ್ ಆರ್ ಟಿ ಸಿ ಬಸ್ ಚಾಲಕ

**ವಾಸ** ಃ ಹುಕ್ಕೇರಿ

**(ದಿನಾಂಕಃ 29-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ: ಶ್ರೀ ವಿ.ಎಸ್.ಎಚ್. ಫಿರ್ಯಾದುದಾರ ಪರವಾಗಿ -**

ನಾನು ವಾಯವ್ಯ ಕಾರ್ನಾಟಕ ರಸ್ತೆ ಸಾರಿಗೆ ವಿಭಾಗ ಚಿಕ್ಕೋಡಿ ವಿಭಾಗದಲ್ಲಿ ಚಾಲಕ ಎಂದು ಕೆಲಸ ಮಾಡುತ್ತಿದ್ದೆನು.

ದಿನಾಂಕ **4-8-2019** ರಂದು ಹುಕ್ಕೇರಿಯಿಂದ ಚಿಕ್ಕೋಡಿಗೆ ಹೋಗುವಾಗ ಜನತಾ ಪ್ಲಾಟ ಹತ್ತಿರ ನಾನು ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ರಸ್ತೆಯ ಮೇಲೆ ಹೊರಟಿದ್ದ ಎತ್ತಿನ ಗಾಡಿಯನ್ನು ಸೈಡು ಹೊಡೆದು ಮುಂದೆ ಹೋಗುವ ಸಲುವಾಗಿ ನನ್ನ ಹಿಂದೆ ಬರುತ್ತಿದ್ದ ಮೋಟಾರ ಸೈಕಲಗೆ ಇಂಡಿಕೇಟರ ಕೊಟ್ಟು ಕೈಸನ್ನೆ ಮಾಡಿರುತ್ತೇನೆ. ಮೋಟಾರ ಸೈಕಲ ಚಾಲಕ ಪೂರ್ತಿಯಾಗಿ ಸಾರಾಯಿ ಕುಡಿದ ನಶೆಯಿಂದ ನಮ್ಮ ಬಸ್ಸನ್ನು ಕಚ್ಚಾ ರಸ್ತೆಯ ಮೂಲಕ ಓವರಟೇಕ ಮಾಡಿ ನನ್ನ ಬಸ್ ಮುಂದೆ ಹಚ್ಚಿರುತ್ತಾನೆ. ಮುಂದುವರೆದು 2-3 ಕಿ.ಮೀ ವರೆಗೆ ನನಗೆ ಮುಂದೆ ಹೋಗಲು ಬಿಡದೇ ಅಡ್ಡಾದಿಡ್ಡಿಯಾಗಿ ಬೈಕ ಚಲಾಯಿಸಿರುತ್ತಾನೆ. ನಂತರ 2-3 ಕಿ.ಮೀ ಹೋದ ನಂತರ ನಾನು ಬಸ್ಸನ್ನು ನಿಲ್ಲಿಸಿರುತ್ತೇನೆ. ಆದರೆ ಆರೋಪಿತನು ಮುಂದೆ ಬಾ ಮಗನೆ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಸಿಕ್ಕಸಿಕ್ಕಂತೆ ಜೋರಾಗಿ ಬೈಕ ಮೇಲೆ ಹೋಗಿರುತ್ತಾನೆ. ನಂತರ ಹನಜಾನಟ್ಟಿ ಗ್ರಾಮದ ಹತ್ತಿರ ಬಸ್ಸು ಚಲಾಯಿಸಿಕೊಂಡು ಹೋದಾಗ ಆರೋಪಿತನು ತನ್ನ ಬೈಕನ್ನು ರಸ್ತೆಯ ಮೇಲೆ ಅಡ್ಡಲಾಗಿ ನಿಲ್ಲಿಸಿದ್ದನು. ನಾನು ಬಸ್ಸನ್ನು ನಿಲ್ಲಿಸಿದಾಗ ಆರೋಪಿತನು ಬಸ್ಸಿ ನ ಹತ್ತಿರ ಬಂದು ಬಾಗಿಲ ತೆಗೆದು ನನ್ನ ಕೊರಳಪಟ್ಟಿಯನ್ನು ಹಿಡಿದು ಬೋಸಡಿ ಮಗನೆ ಎಂದು ಅವ್ಯಾಚ್ಯವಾಗಿ ಬೈದು ನನಗೆ ಸೈಡ ಕೊಡುವುದಿಲ್ಲ ಎಂದು ಹೇಳಿ ನನಗೆ ಕೆಳಗೆ ಎಳೆದು ಒಗೆದಿರುತ್ತಾನೆ. ನಾನು ಕೆಳಗೆ ಬಿದ್ದಿದ್ದರಿಂದ ಬಲಗಾಲ ಮೊಣಕಾಲಿನ ನರಕ್ಕೆ ಪೆಟ್ಟಾಗಿ ತೀವ್ರಸ್ವರೂಪದ ನೋವಾಗಿರುತ್ತದೆ.

ನಂತರ ಆರೋಪಿತನು ನನಗೆ ಮೊಣಕಾಲು ಮತ್ತು ತೊಡೆಯ ಮೇಲೆ ಮತ್ತು ಇನ್ನಿತರ ಕಡೆಗೆ ಹೊಡೆ ಬಡೆ ಮಾಡಿರುತ್ತಾನೆ. ನಂತರ ಕಂಡಕ್ಟರ ಮತ್ತು ಪ್ರಯಾಣಿಕರು ಜಗಳ ಬಿಡಿಸಿರುತ್ತಾರೆ. ನಂತರ ಪ್ರಯಾಣಿಕರು ಮತ್ತು ಕಂಡಕ್ಟರ ಇವರು ನನ್ನನ್ನು ಹುಕ್ಕೇರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಮ್ಮ ಕಂಡಕ್ಟರ ಹುಕ್ಕೇರಿ ಪೋಲಿಸರನ್ನು ಕರೆದುಕೊಂಡು ಬಂದಿರುತ್ತಾರೆ. ಪೋಲಿಸರು

ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ . ಆ ಸಮಯದಲ್ಲಿ ನಮ್ಮ ಸಂಬಂಧಿಕರು ಯಾರು ಆಸ್ಪತ್ರೆಗೆ ಬಂದಿರಲಿಲ್ಲ. ಸರಕಾರಿ ಆಸ್ಪತ್ರೆಯವರು ನನ್ನನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಕೆಎಲ್ ಇ ಆಸ್ಪತ್ರೆಗೆ ಹೋಗಿ ಎಂದು ಕಳುಹಿಸಿ ಕೊಟ್ಟಿರುತ್ತಾರೆ. **1** ತಾಸು ನಂತರ ನಮ್ಮ ತಂದೆ ಹುಕ್ಕೇರಿ ಆಸ್ಪತ್ರೆಗೆ ಬಂದು ಗಾಡಿ ತರಲು ಹೋಗಿದ್ದಾಗ ಆರೋಪಿತನು ಅಲ್ಲಿಗೆ ಬಂದಿದ್ದನು. ಆರೋಪಿತನು ನನ್ನ ತಪ್ಪಾಗಿದೆ ನಿನಗೆ ಏನು ಖರ್ಚಾಗಿದೆ ಕೊಡುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿತನ ಊರಿನವರು ಮಾತ್ರ ಸೇರಿದ್ದರು. ಅವರೆಲ್ಲರೂ ಸೇರಿ ಪೋಲಿಸರಿಗೆ ಇಬ್ಬರ ನಡುವೆ ಅಪಸಾತ ಆಗಿದೆ ಎಲ್ಲಾ ಮುಗಿದಿದೆ ಎಂದು ಹೇಳಿ ಪೋಲಿಸರನ್ನು ವಾಪಸ ಕಳುಹಿಸಿರುತ್ತಾರೆ.

ನಂತರ ನಾನು ಕೆ.ಎಲ್.ಇ ಆಸ್ಪತ್ರೆಗೆ ದಾಖಲ ಆಗಿರುತ್ತೇನೆ. ನಿನ್ನ ಮೊಣಕಾಲಿನ ಲೆಗಮೆಂಟ ಕಟ್ಟಾಗಿದೆ ಶಸ್ತ್ರಚಿಕಿತ್ಸೆ ಮಾಡಬೇಕು ಖರ್ಚು ಆಗುತ್ತದೆ ಎಂದು ಹೇಳಿರುತ್ತಾರೆ. ನಂತರ ನಮ್ಮ ತಂದೆ ಆರೋಪಿತನ ಹತ್ತಿರ ಹೋಗಿ ನೀನೆ ಅಪಸಾತ ಅಂತಾ ಹೇಳಿದ ಪ್ರಕಾರ ಆಸ್ಪತ್ರೆ ಬಿಲ ಕೊಡು ಎಂದು ಕೇಳಿದ್ದು, ಆತನು ಈಗ ನನ್ನ ಹತ್ತಿರ ಹಣ ಇಲ್ಲ ಒಂದು ವಾರ ಹೋಗಲಿ ಎಂದು ಹಾರೈಕೆ ಉತ್ತರ ಹೇಳಿ ಕಳುಹಿಸಿರುತ್ತಾನೆ. ಕೆ.ಎಲ್.ಇ ಆಸ್ಪತ್ರೆಯಲ್ಲಿ ದುಡ್ಡಿನ ವ್ಯವಸ್ಥೆ ಆಗದೇ ಇದ್ದುದರಿಂದ ಚಿಕ್ಕೋಡಿಯ ದಿಯಾ ಆಸ್ಪತ್ರೆಗೆ ಬಂದು ದಾಖಲ ಆಗಿರುತ್ತೇನೆ. ದಿನಾಂಕ **10-8-2019** ರಂದು ಶಸ್ತ್ರಚಿಕಿತ್ಸೆ ಆಗಿರುತ್ತದೆ. ದಿನಾಂಕ **16-08-2019** ರಂದು ನಾನು ಡಿಸ್ಚಾರ್ಜ ಆಗಿರುತ್ತೇನೆ. ದಿಯಾ ಆಸ್ಪತ್ರೆಯಲ್ಲಿ ನನಗೆ ರೂ. **70,000-00** ಖರ್ಚು ಬಂದಿರುತ್ತದೇ. ನಂತರ ವೈದ್ಯರು ನನಗೆ **8-10** ದಿನಗಳವರೆಗೆ ನಡೆದಾಡಕೂಡದು ಎಂದು ಹೇಳಿದ್ದರಿಂದ ನಾನು ಮನೆಯಲ್ಲಿದ್ದೆನು. ತದನಂತರ ನಾನು ಹುಕ್ಕೇರಿ ಠಾಣೆಯಲ್ಲಿ ದೂರು ಕೊಡಲು ಹೋದಾಗ ಪೋಲಿಸರು ನಿಮ್ಮ ಕೇಸು ಅಪಸಾತಿ ಆಗಿದೆ ಎಂದು ಹೇಳಿ ಫಿರ್ಯಾದು ಪಡೆಯಲು ನಿರಾಕರಿಸಿರುತ್ತಾರೆ. ಆದ್ದರಿಂದ ನ್ಯಾಯಾಲಯದಲ್ಲಿ ಈ ಫಿರ್ಯಾದನ್ನು ಸಲ್ಲಿಸಿರುತ್ತೇನೆ. ಆರೋಪಿತನ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ.

ದಾಖಲೆಗಳನ್ನು ಈಗಾಗಲೇ ನಿ.ಪಿ-**1** ರಿಂದ **6** ಎಂದು ಗುರುತಿಸಲಾಗಿದ್ದು ಈಗ ಅವುಗಳನ್ನು ನಿ.ಪಿ-**1** ರಿಂದ **6** ಎಂದು ಗುರುತಿಸಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ